

ಗಟ್ಟಿ ಪಾತ್ರಗಳ ದಿಟ್ಟೆ ಸಂಯುಕ್ತಾ ಹೊರನಾಡು




ರೂಪಾರಾವ್ ನಿರ್ದೇಶನದ 'ಗಂಟುಮೂಟೆ' (2019) ಹದಿಹರೆಯದ ಯುವತಿಯ ಒಳಗುದಿಗಳಿಗೆ ದನಿಯಾದ ವಿಶಿಷ್ಟ ಸಿನಿಮಾ

ಪಾತ್ರಗಳಂತಿದ್ದರು. ಹೆಣ್ಣನ್ನು, ಪಾತ್ರವನ್ನು ಹೇಗೆ ಪ್ರೊಜೆಕ್ಟ್ ಮಾಡುತ್ತೇವೆ ಎಂಬುದು ಮುಖ್ಯ'' ಎಂದು ಸಿನಿಮಾದಲ್ಲಿ ನಟಿಯ ಮಹತ್ವವನ್ನು ಬಿಂಬಿಸುವ ಅಂಶವನ್ನು ಸೂಕ್ಷ್ಮವಾಗಿ ತೆರೆದಿಟ್ಟರು.

''ಆನಂತರ ಸಿನಿಮಾಗಾಗಿ ಕಥೆಗಳನ್ನು ಮಾಡುವ ಪರಿಪಾಟ ಹಲವು ರೂಪುಗಳನ್ನು ಪಡೆಯಿತು. ಹಾದಿ ಬದಲಾಯಿತು. ಸಿನಿಮಾ ಮಾಡುವವರಿಗೆ ಭ್ರಮೆ ಬಂತು. ಸಿನಿಮಾ ಹೀರೋ ಆಧಾರಿತ ಇದ್ದರೆ ದೊಡ್ಡ ಯಶಸ್ಸು ಸಿಗುತ್ತದೆ ಎಂದು. ಆ ಸೂತ್ರದಲ್ಲೇ ದಶಕಗಳ ಕಾಲ ನೂರಾರು ಸಿನಿಮಾಗಳು ಬಂದುಬಿಟ್ಟವು'' ಎನ್ನುವ ವಿಶ್ವನಾಥ್, ''ಮಹಿಳೆಯರ ಸಿನಿಮಾ ಮಾಡಬೇಕಾದರೆ ತುಂಬಾ ಸೂಕ್ಷ್ಮತೆಯಿರಬೇಕು. ಮಹಿಳೆಯರ ಸೈಕಾಲಜಿ ಅರ್ಥ ಮಾಡಿಕೊಂಡು ಸಿನಿಮಾ ಮಾಡಬೇಕು'' ಎನ್ನುವ ಕಿವಿಮಾತು ಹೇಳಿದರು.

''ಈಗ ಡಿಜಿಟಲ್ ಮೀಡಿಯಾ ಬಂದ ಮೇಲೆ ತುಂಬಾ ಸಿನಿಮಾಗಳನ್ನು ಎಲ್ಲರೂ ನೋಡಲು ಆಗುತ್ತಿಲ್ಲ. ವರ್ಷಕ್ಕೆ 300–350 ಸಿನಿಮಾಗಳು ಬಿಡುಗಡೆಯಾಗುತ್ತವೆ. ಮಹಿಳಾ ಪ್ರಧಾನ ಕಥೆಗಳೂ ಬರುತ್ತಿವೆ. ಆದರೆ ಅಲ್ಲಲ್ಲೇ ಮರೆಯಾಗಿ ಹೋಗುತ್ತಿವೆ. ಹೊಸ ಹುಡುಗರು ಒಳ್ಳೊಳ್ಳೆ ಕಥೆಗಳನ್ನಿಟ್ಟುಕೊಂಡು ಸಿನಿಮಾ ಮಾಡುತ್ತಿದ್ದಾರೆ. ಆದರೆ ಮುನ್ನೆಲೆಗೆ ಬರುತ್ತಿರುವುದೇ ಕಷ್ಟವಾಗಿ, ಹೇಳ ಹೆಸರಿಲ್ಲದಂತೆ ಕಳೆದುಹೋಗುತ್ತಿವೆ'' ಎಂದು ಸಮಸ್ಯೆಯ ಮತ್ತೊಂದು ಮಗ್ಗುಲನ್ನೂ ವಿಶ್ವನಾಥ್ ತೆರೆದಿಡುತ್ತಾರೆ. ''ಸಿನಿಮಾ ವಸ್ತುವೊಂದು ಮಹಿಳಾಪ್ರಧಾನವಾಗಿದ್ದರೆ ಸಾಲದು. ಮೇಕಿಂಗ್ ತುಂಬಾ ಮುಖ್ಯ. ಮೇಕಿಂಗ್‌ನಿಂದ ಸಿನಿಮಾ ಹಿಂದೆ ಉಳಿದುಬಿಡಬಹುದು. ಎಷ್ಟು ಚೆನ್ನಾಗಿ ಸಿನಿಮಾ ಮಾಡುವಿರಿ ಎಂಬುದು ಮುಖ್ಯವಾಗುತ್ತದೆ. ಜನರು ದುಡ್ಡು ಕೊಟ್ಟು ಬಂದು ನೋಡಬೇಕೆಂದಾಗ ಅದನ್ನು ಕೊಡಬೇಕಾದ ರೀತಿ ಕೊಡುವುದು ಮುಖ್ಯವಲ್ಲವೇ?'' ಎಂದು ಸೂಕ್ಷ್ಮ ಸಂಗತಿಯನ್ನೂ ತೆರೆದಿಡುತ್ತಾರೆ.

ಈಗಿನ ನಾಯಕಿಯರಿಗೆ, ಪಾತ್ರದಿಂದಲೇ ಗುರುತಿಸಿಕೊಳ್ಳುವಂಥ ಸಿನಿಮಾಗಳು ಇತ್ತೀಚೆಗೆ ಕಂಡುಬರುತ್ತಿಲ್ಲ ಎಂಬುದನ್ನು ವಿಶ್ವನಾಥ್ ಒಪ್ಪಿಕೊಳ್ಳುತ್ತಾರೆ. ''ನಾಯಕಿಯರಿಗೆ, ಅವರದ್ದೇ ಛಾಪು ಮೂಡಿಸುವಂಥ ಸಿನಿಮಾಗಳು ಈಗ ಕಡಿಮೆಯೇ. ರಾಗಿಣಿ ದ್ವಿವೇದಿ ಅಂಥ ಒಂದು ಪ್ರಯತ್ನದ ಭಾಗವಾಗಿ 'ರಾಗಿಣಿ ಐಪಿಎಸ್' ಎಂಬ ಸಿನಿಮಾ ಮಾಡಿದರು. ಇನ್ನಷ್ಟು ಸಿನಿಮಾಗಳು ಮಾಡುವಂತಿದ್ದರು. ಆದರೆ ಒಂದು ವಿವಾದದ ನಂತರ ಅವೆಲ್ಲವೂ ಮರೆಯಾದವು'' ಎನ್ನುವ ಅವರು, ''ಕನ್ನಡ ಚಿತ್ರರಂಗದಲ್ಲಿ ಒಳ್ಳೊಳ್ಳೆ ಕಲಾವಿದೆಯರು ಇದ್ದಾರೆ. ನಾಟಕದ ಗಟ್ಟಿ ಹಿನ್ನೆಲೆಯಿರುವವರು ಇದ್ದಾರೆ. ಆದರೆ ಅವರಿಗೆ ಸವಾಲಾಗುವಂಥ ಪಾತ್ರಗಳು ಸಿಗುತ್ತಿಲ್ಲ. ಅವರಿಗೂ ತಮ್ಮನ್ನು ಗುರುತಿಸಿಕೊಳ್ಳುವ ಆಸೆ ಇರುತ್ತದೆ. ಆದರೆ ಅದು ಸಾಧ್ಯವಾಗುವಂಥ ಪಾತ್ರಗಳು ಸೃಷ್ಟಿಯಾಗಬೇಕಿದೆ'' ಎಂದು ಮಹಿಳಾ ಪ್ರಧಾನಚಿತ್ರಗಳ ಮೂಲ ಕೊರತೆಯ ಕುರಿತು ಗಮನಸೆಳೆಯುತ್ತಾರೆ. 'ನಾಗರಹಾವು' ಚಿತ್ರದಲ್ಲಿ ಒನಕೆ ಓಬವ್ವನ ಪಾತ್ರ ಒಂದೇ ಹಾಡಲ್ಲಿ ಬಂದುಹೋಗುತ್ತದೆ. ಅದನ್ನು ನೀವು ಇಂದಿಗೂ ನೆನಪಿಸಿಕೊಳ್ಳುತ್ತೀರಿ. ಅಂಥ ಪಾತ್ರ ಈಗ ಸಿಗಲು ಸಾಧ್ಯವೇ? ಎಂಬ ಪ್ರಶ್ನೆಯನ್ನೂ ಮುಂದಿಡುತ್ತಾರೆ.

### ಕನ್ನಡದ ನಟಿಯರೆಲ್ಲ ಒಂದಾಗಿ ನಿಲ್ಲಿ...

''ಕಮರ್ಷಿಯಲ್ ಸಿನಿಮಾಗಳಲ್ಲಿ ಮುಂಚೆಗಿಂತಲೂ ಈಗ ಹೆಣ್ಣುಮಕ್ಕಳಿಗೆ 'ಸ್ಕ್ರೀನ್ ಸ್ಪೇಸ್' ಎನ್ನುವುದು ಒಂದರ್ಥದಲ್ಲಿ